4) ಈ ಮಾದರಿಗೆ ರಿಸರ್ವ್ ಬ್ಯಾಂಕ್‌ಗೆ ಸಲ್ಲಿಸಿರುವ ಪ್ರಸ್ತಾವನೆಯ ವಿವರ ಒದಗಿಸುವುದು?

ಶ್ರೀ ಹೆಚ್.ವಿಶ್ವನಾಥ್ (ಸಹಕಾರ ಸಚಿವರು):

ಅ) ಅಪೆಕ್ಸ್ ಬ್ಯಾಂಕ್ ವರ್ಗಾವಣೆ ಮಾಡುತ್ತಿರುವಂತೆ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗಳು ಸಹ ತಮ್ಮ ಕಾರ್ಯವ್ಯಾಪ್ತಿ ಒಳಗೆ ನೌಕರರ ವರ್ಗಾವಣೆ ಮಾಡುತ್ತಿವೆ.

2) ಹೌದು.

3) ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಸಹಕಾರ ಸಂಘಗಳ ಕಾಯ್ದೆಯಡಿಯಲ್ಲಿ ನೋಂದಾಯಿಸಲ್ಪಟ್ಟಿದ್ದು, ತನ್ನದೇ ಆದ ಉಪನಿಯಮಗಳು, ಒಳನಿಯಮಗಳ ಪ್ರಕಾರ ಹಾಗೂ ನಬಾರ್ಡ್ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್‌ನ ಮಾರ್ಗಸೂಚಿಗಳ ಪ್ರಕಾರ ಕಾರ್ಯನಿರ್ವಹಿಸುತ್ತದೆ.

4) ಈ ರೀತಿ ಯಾವುದೇ ಪ್ರಸ್ತಾವನೆಯನ್ನು ರಿಸರ್ವ್ ಬ್ಯಾಂಕ್‌ಗೆ ಸಲ್ಲಿಸಿರುವುದಿಲ್ಲ.

ಮೈಸೂರು-ಚಾಮರಾಜನಗರ ಜಿಲ್ಲೆಗಳಲ್ಲಿ ಬೃಹತ್ ನೀರಾವರಿ ಕಾಮಗಾರಿ

1388 (1667) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಮತ್ತು ಚಾಮರಾಜ ನಗರ ಜಿಲ್ಲೆಗಳಲ್ಲಿ ಕೈಗೊಳ್ಳಲಾಗಿರುವ ಬೃಹತ್ ಮತ್ತು ಮಧ್ಯಮ ನೀರಾವರಿ ಕಾಮಗಾರಿಗಳು ಯಾವುವು;

ಆ) ಈ ಕಾಮಗಾರಿಗಳ ಉದ್ದೇಶಿತ ವೆಚ್ಚ ಎಷ್ಟು ಈವರೆಗೆ ಎಷ್ಟು ಖರ್ಚು ಮಾಡಲಾಗಿದೆ; ಕಾಮಗಾರಿ ಮುಕ್ತಾಯಗೊಳಿಸಲು ಇನ್ನು ಎಷ್ಟು ಅನುದಾನ ಬೇಕಾಗಿದೆ; ಎಂದು ಪೂರ್ಣಗೊಳಿಸಲಾಗುವುದು;

ಇ) ನೀಡಿರುವ ಅನುದಾನದಲ್ಲಿ ವೇತನಕ್ಕೆ ಮಾಡಿರುವ ವೆಚ್ಚ ಎಷ್ಟು; ಭೂ ಸ್ವಾಧೀನ ಪ್ರಕ್ರಿಯೆಗೆ ಮಾಡಿರುವ ವೆಚ್ಚ ಎಷ್ಟು; ಕಾಮಗಾರಿಕೆಗೆ ಮಾಡಲಾಗಿರುವ ವೆಚ್ಚ ಎಷ್ಟು; ಈ ಉದ್ದೇಶಕ್ಕೆ 2001-02 ಸಾಲಿನಲ್ಲಿ ಎಷ್ಟು ಎಲ್.ಓ.ಸಿ.ಬಿಡುಗಡೆ ಮಡಲಾಗಿದೆ.;

ಈ) ಈ ಕಾಮಗಾರಿಗಳಲ್ಲಿ ಅಕ್ರಮ ನಡೆದಿದ್ದು ಲೋಕಾಯುಕ್ತ ಅಥವಾ ಸಿಓಡಿ ವಿಚಾರಣೆಗೆ ಒಳಪಡಿಸಿರುವ ಪ್ರಕರಣಗಳು ಎಷ್ಟು; ಇದರಲ್ಲಿ ಶಾಮೀಲು ಆದ ಅಧಿಕಾರಿಗಳು ಯಾರು; ಒಳಗೊಂಡ ಮೊತ್ತ ಎಷ್ಟು;

ಉ) ಕಳಪೆ ಕಾಮಗಾರಿ, ಡಬಲ್ ಪೇಮೆಂಟ್ ಮುಂತಾದ ದೂರುಗಳು ಇರುವ ಪ್ರಕರಣಗಳು ಎಷ್ಟು; ಈ ಅಧಿಕಾರಿಗಳ ವಿರುದ್ಧ ತೆಗೆದು ಕೊಂಡ ಕ್ರಮವೇನು?

ಶ್ರೀ ಹೆಚ್.ಕೆ. ಪಾಟೀಲ್ (ಜನ ಸಂಪನ್ಮೂಲ ಸಚಿವರು):

ಅ) ಮೈಸೂರು ಜಿಲ್ಲೆಯಲ್ಲಿ ಕೈಗೊಳ್ಳಲಾಗಿರುವ ಬೃಹತ್ ಕಾಮಗಾರಿಗಳು ಹಾರಂಗಿ, ಕಬಿನಿ ಮತ್ತು ಡಿ.ಡಿ.ಆರಸ್ (ವರುಣಾ ನಾಲೆ) ಕಾಮಗಾರಿಗಳು. ತಾರಕಾ ಮತ್ತು ನಂಜಾಪುರ ಏತ ನೀರಾವರಿ ಯೋಜನೆಗಳು ಮಧ್ಯಮ ನೀರಾವರಿ ಕಾಮಗಾರಿಗಳಾಗಿವೆ. ಅಂತೆಯೇ ಚಾಮರಾಜನಗರ ಜಿಲ್ಲೆಯಲ್ಲಿ ಕಬಿನಿ ಬೃಹತ್ ನೀರಾವರಿ ಯೋಜನೆಯನ್ನು ಕೈಗೊಳ್ಳಲಾಗಿದೆ. ಉಡುತೊರೆಹಳ್ಳ ಮಧ್ಯಮ ನೀರಾವರಿ ಯೋಜನೆಯನ್ನು ಚಾಮರಾಜನಗರ ಜಿಲ್ಲೆಯಲ್ಲಿ ಕೈಗೊಳ್ಳಲಾಗಿದೆ.

ಆ) ಅನುಬಂಧದಲ್ಲಿ ಲಗತ್ತಿಸಿದೆ

ಇ) ಅನುಬಂಧದಲ್ಲಿ ಲಗತ್ತಿಸಿದೆ

ಈ) ಈ ವಲಯಕ್ಕೆ ಸಂಭಂಧಿಸಿದ 3 ವೃತ್ತಗಳಲ್ಲಿ ಸಿ.ಓ.ಡಿ ಅಥವಾ ಲೋಕಾಯುಕ್ತ ವಿಚಾರಣೆಗೆ ಒಳಪಡಿಸಿರುವ ಪ್ರಕರಣಗಳು ಯಾವುದೂ ಇರುವುದಿಲ್ಲ.

ಉ) ಯಾವುದೂ ಇರುವುದಿಲ್ಲ.

ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಎ.ಎಸ್.ಗುರುಸ್ವಾಮಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1667 ಕ್ಕೆ ಅನುಬಂಧ

(ರೂ.ಲಕ್ಷಗಳಲ್ಲಿ)

ಯೋಜನೆ	ಉದ್ದೇಶಿತ ವೆಚ್ಚ	ಈವರೆಗೆ ಆದ ವೆಚ್ಚ	ಅಗತ್ಯ ಅನುದಾನ	ಪೂರ್ಣ ವಾಗುವ ವರ್ಷ	ವೇತನ	ಭೂಸ್ವಾಧೀನ	ಎಲ್‌ಒಸಿ ಬಿಡುಗಡೆ (2001-02)
ಕಬಿಸಿ	123300.00	37715.00	85585.00	2010	6866.00	2447.00	925.00
ವರುಣಾ	32600.00	27179.00	5451.00	2005	5329.00	1136.00	809.00
ತಾರಕಾ	5100.00	3093.00	2007.00	2005	311.00	311.00	206.00
ಉಡುತೊರೆ ಹಳ್ಳ	15610.00	12954.00	2656.00	2005	273.00	369.00	947.00
ಹಾರಂಗಿ	37300.00	3170.18	5500.82	2004	5800.31	1100.48	859.00
ನಂಜಾಪುರ ಎ.ನೀಯೋ	3161.00	565.99	2594.01	2003	0.39	4.02	125.00
ಒಟ್ಟು ವೆಚ್ಚ	217071.00	84677.17	103793.83		18[illegible].31	5367.50	3871.00

ಹಾಸನ ಕ್ಷೇತ್ರದ ಕಸಬಾ, ಕಟ್ಟಾಯ ಶಾಂತಿ ಗ್ರಾಮ ಹೊಬಳಿಗೆ ನ್ಯಾಯಬೆಲೆ ಅಂಗಡಿಗಳಲ್ಲಿ ಅವ್ಯವಹಾರ

1389 (1699) ಶ್ರೀ ಕೆ.ಹೆಚ್.ಹನುಮೇಗೌಡ (ಹಾಸನ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಹಾಸನ ವಿಧಾನಸಭಾ ಕ್ಷೇತ್ರದ ಕಸಬಾ, ಕಟ್ಟಾಯ, ಶಾಂತಿ ಗ್ರಾಮ ಹೋಬಳಿಗಳ ನ್ಯಾಯಬೆಲೆ ಅಂಗಡಿಯನ್ನು ನೆಸುತ್ತಿರುವವರಿಂದ ಅವ್ಯವಹಾರ ನಡೆದಿರುವ ಬಗ್ಗೆ ಎಷ್ಟುದೂರುಗಳು ಬಂದಿವೆ, ವಿವರ ನೀಡುವುದು.

2) ಈ ರೀತಿ ಅಕ್ರಮ ನಡೆಸಿದ ನ್ಯಾಯಬೆಲೆ ಅಂಗಡಿಗಳ ಮಾಲೀಕರ ವಿರುದ್ಧ ಸರ್ಕಾರ ಏನು ಕ್ರಮ ಕೈಗೊಂಡಿದೆ? ವಿವರ ನೀಡುವುದು?

ಶ್ರೀ ರಾಮಲಿಂಗರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

1) 35 ದೂರುಗಳು ಬಂದಿದ್ದು, ಹೋಬಳಿವಾರು ದೂರನ್ನು ಸ್ವೀಕರಿಸಿರುವ ಗ್ರಾಮಗಳ ವಿವರ ಈ ಕೆಳಕಂಡಂತಿವೆ: